## ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಾರವಾರ

**ಸಿ.ಸಿ. ನಂ. 361/16**

ಚಾ.ಸಾ. 77

ಪ್ರಾ.ಸಾ. 47

| | | |
|---|---|---|
| ಸಾಕ್ಷಿದಾರರ ಹೆಸರು | – | ರಾಘವೇಂದ್ರ ನಾಯ್ಕ |
| ತಂದೆಯ ಹೆಸರು | – | ಬೀರಾ ನಾಯ್ಕ |
| ವಯಸ್ಸು | – | 53 ವರ್ಷ |
| ಉದ್ಯೋಗ | – | ಬೇಕರಿಯಲ್ಲಿ ಕೂಲಿ ಕೆಲಸ |
| ವಾಸ್ತವ್ಯ | – | ಸಿದ್ದಾಪುರ |

(ಇಂದು ದಿನಾಂಕಃ 06–04–2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆಃ ಮಾನ್ಯ ಹಿರಿಯ ಸ.ಸ.ಅ. ರವರಿಂದಃ**

ನಾನು ನವತಾರಾ ಲಾಡ್ಜನಲ್ಲಿ ನಾನು 2000 ರಿಂದ 3 ವರ್ಷಗಳ ಕಾಲ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದೆ. ಆಗ ನನ್ನ ಜೊತೆ ಚಾ.ಸಾ. 78 ರವರು ನನ್ನೊಂದಿಗೆ ರೂಮ್ ಬಾಯ್ ಆಗಿ ಕೆಲಸ ಮಾಡುತ್ತಿದ್ದರು. ಆ ಸಮಯದಲ್ಲಿ ನಮ್ಮ ಲಾಡ್ಜನಲ್ಲಿ ನೌಕರಿಗೆ ಸಂಬಂಧಪಟ್ಟಂತೆ ಯಾವುದೇ ಮೋಸ, ವಂಚನೆಯ ಕೇಸ್ ಆಗಿದ್ದರ ಬಗ್ಗೆ ಗೊತ್ತಿಲ್ಲ. ನಾನು ಪೊಲೀಸರ ಮುಂದೆ ಹೇಳಿಕೆ ನೀಡಿಲ್ಲ. 1 ರಿಂದ 5 ನೇ ಆರೋಪಿತರನ್ನು ನೋಡಿಲ್ಲ. ನಾನು ಪೊಲೀಸರಿಗೆ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಮಾನ್ಯ ಹಿರಿಯ ಸ.ಸ.ಅ. ರವರು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಹಿರಿಯ ಸ.ಸ.ಅ. ರವರಿಂದಃ**

ದಿನಾಂಕಃ 21–05–2002 ರಂದು ನಾನು ಬೆಳಿಗ್ಗೆ 7.40 ಗಂಟೆ ಸಮಯದಲ್ಲಿ ಲಾಡ್ಜನ ಮ್ಯಾನೇಜರ್ ಕರ್ತವ್ಯದಲ್ಲಿದ್ದಾಗ 1 ರಿಂದ 4 ನೇ ಆರೋಪಿತರು ನಮ್ಮ ಲಾಡ್ಜ್ ಗೆ ಬಂದು 218 ನೇ ರೂಮ್‌ನ್ನು ಪಡೆದುಕೊಂಡಿದ್ದರು ಎಂದರೆ ಗೊತ್ತಿಲ್ಲ. ಸದರಿಯವರು ಕೆಎ–25–ಎಂ–2037 ನೇ

ವಾಹನದಲ್ಲಿ ಬಂದಿದ್ದು ಸದರಿ ವಾಹನ ಸಂಖ್ಯೆ ನಮ್ಮ ರಜಿಸ್ಟರನಲ್ಲಿ ನಮೂದಿಸಿ ರೂಮ್‌ನ್ನು ಬಾಡಿಗೆ ಪಡೆದಿದ್ದರು ಎಂದರೆ ಸರಿಯಲ್ಲ. ಸದರಿಯವರು ನಮ್ಮ ಲಾಡ್ಜನಲ್ಲಿ ಹಲವಾರು ಯುವಕ-ಯುವತಿಯರಿಗೆ ನೌಕರಿ ಕೊಡಿಸುವುದಾಗಿ ಅವರಿಂದ ಹಣ ಪಡೆದು ಮೋಸ ಮಾಡಿರುವ ವಿಷಯ ನನಗೆ ತಿಳಿದು ಬಂದಿದೆ ಎಂದರೆ ಸರಿಯಲ್ಲ. ದಿನಾಂಕ 27-08-2002 ರಂದು ನಾನು ಮೇಲೆ ನಮೂದಿಸಿದ ----------- ಹಾಜರುಪಡಿಸುತ್ತೇನೆ ಎಂದು ಈಗ ಓದಿ ಹೇಳಿದಂತೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿ.ಪಿ. 46 ಎಂದು ಗುರುತಿಸಲಾಯಿತು. ಎಲ್ಲಾ ವಿಷಯಗಳು ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರು ಹಾಜರಿದ್ದು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.**

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಮುಖ್ಯ ನ್ಯಾಯಿಕ ದಂ. ಕಾರವಾರ